# ಸಮನ್ವಯ ಭಾವ

**ಏಕಂ ಸದ್ವಿಪ್ರಾ ಬಹುಧಾ ವದಂತಿ** –*ಋಗ್ವೇದ*

ಸತ್ಯ ಒಂದೇ. ಬಲ್ಲವರು ಅದನ್ನು ಬಹುರೀತಿಯಲ್ಲಿ ಹೇಳುವರು.

**ಜನಂ ಬಿಭ್ರತೀ ಬಹುಧಾ ವಿವಾಚಸಂ**
**ನಾನಾ ಧರ್ಮಾಣಂ ಪೃಥಿವೀ ಯಥೌಕಸಮ್ |**
**ಸಹಸ್ರಂ ಧಾರಾ ದ್ರವಿಣಸ್ಯ ಮೇ ದುಹಂ**
**ಧ್ರುವೇವ ಧೇನುಃ ಅನಪಾಸ್ಫುರಂತಿ ||** –*ಅಥರ್ವವೇದ*

ವಿವಿಧ ಭಾಷಾ ಜನಗಳಿಗೂ ವಿವಿಧ ಧರ್ಮಾವಲಂಬಿಗಳಿಗೂ ಈ ಪೃಥ್ವಿಯು ಆಶ್ರಯವಾಗಿದೆ. ಚಲಿಸದ ಹಸುವಿನಂತೆ ಈ ಪೃಥ್ವಿಯು ಸಹಸ್ರಧಾರೆಗಳ ಮೂಲಕ ನಮ್ಮನ್ನು ಪೋಷಿಸು ತ್ತಿರುವುದು.

**ಏಕವರ್ಣಂ ಯಥಾ ದುಗ್ಧಂ ಭಿನ್ನವರ್ಣಾಸು ಧೇನುಷು |**
**ತಥೈವ ಧರ್ಮವೈಚಿತ್ರ್ಯಂ ತತ್ತ್ವಮೇಕಂ ಪರಂ ಸ್ಮೃತಮ್ ||**

ಬೇರೆ ಬೇರೆ ಬಣ್ಣದ ಹಸುಗಳಿಂದ ಕರೆಯಲ್ಪಟ್ಟ ಹಾಲು ಒಂದೇ ಬಣ್ಣದ್ದಾಗಿರುವಂತೆ ಧರ್ಮಗಳಲ್ಲಿ ಎಷ್ಟೇ ವೈಚಿತ್ರ್ಯವಿದ್ದರೂ ಪರತತ್ತ್ವ ಒಂದೇ ಆಗಿರುವುದು.

---

**ಧರ್ಮದ** ವಿಷಯದಲ್ಲಿ ಯಾವ ಬಲಾತ್ಕಾರವೂ ಇಲ್ಲದಿರಲಿ. (೨:೨೫೬)

ಪ್ರತಿಯೊಬ್ಬನಿಗೂ ಒಂದು ನಿಯಮ ಮತ್ತು ಒಂದು ಮಾರ್ಗ ನೀಡಲಾಗಿದೆ.... ದೇವರು ಇಷ್ಟಪಟ್ಟಿದ್ದರೆ ನಿಮ್ಮೆಲ್ಲರನ್ನೂ (ಇಡೀ ಮಾನವ ಕೋಟಿಯನ್ನು) ಒಂದೇ ರೀತಿಯವರನ್ನಾಗಿ (ಒಂದೇ ಧರ್ಮಾವಲಂಬಿಗಳನ್ನಾಗಿ) ಮಾಡಬಹುದಿತ್ತು. ಆದರೆ ಅವನು ಬೇರೆ ರೀತಿಯೇ ಮಾಡಿರುವನು. ನಿಮಗೆ ಪ್ರತ್ಯೇಕವಾಗಿ ಯಾವುದನ್ನು ನೀಡಿರುವನೋ ಅದೇ ಮಾರ್ಗದಲ್ಲಿಯೇ ನೀವು ಸತ್ಕಾರ್ಯದಲ್ಲಿ ಮುಂದುವರಿಯಬೇಕೆಂಬುದು ಅವನ ಇಚ್ಛೆ. ನೀವು ದೇವರ ಎಡೆಗೆ ಹೋಗಿ, ನಿಮಗೆ ಯಾವುದು ಒಪ್ಪಿಗೆಯಾಗುವುದಿಲ್ಲವೊ ಅದನ್ನು ಕುರಿತಾಗಿ ಅವನೇ ಹೇಳುತ್ತಾನೆ. (೫:೪೮)

ನಿಮಗೆ ನಿಮ್ಮ ಧರ್ಮ, ನನಗೆ ನನ್ನ ಧರ್ಮ (೧೦೯:೬).

**ಕೊರಾನ್**

---

**ಎಲ್ಲ** ಶಾಸ್ತ್ರಗಳ ಧ್ವನಿಯೂ ಒಂದೇ. ಆದರೆ ಅವು ಎಲ್ಲರಿಗೆ ಒಂದೇ ರೀತಿಯಲ್ಲಿ ಬೋಧಿಸುವುದಿಲ್ಲ. ಏಕೆಂದರೆ ಅಂತರ್ಯಾಮಿಯಾದ ನಾನು (ದೇವರು) ಸತ್ಯವನ್ನು ಬೋಧಿಸುವವನು, ಹೃದಯವನ್ನು ಶೋಧಿಸುವವನು, ಆಲೋಚನೆಗಳನ್ನು ತಿಳಿಯುವವನು, ಕ್ರಿಯೆಯನ್ನು ಪ್ರಚೋದಿಸುವವನು. ಪ್ರತಿಯೊಬ್ಬನಿಗೂ ಅವನವನ ಯೋಗ್ಯತೆಗೆ ತಕ್ಕಂತೆ ಹಂಚುತ್ತೇನೆ.

*–The Imitation of Christ*



ನಾನು ಬೇರೆ ಬೇರೆ ಧರ್ಮಗಳನ್ನು ಅಭ್ಯಾಸ ಮಾಡಿದ್ದೇನೆ. ಹಿಂದೂ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ಸಾಧನೆ ಮಾಡಿದ್ದೇನೆ. ಹಿಂದೂಧರ್ಮದ ಶಾಕ್ತ, ವೈಷ್ಣವ, ಶೈವ, ವೇದಾಂತ ಇನ್ನೂ ಮುಂತಾದ ಮತಗಳನ್ನು ಅನುಸರಿಸಿದ್ದೇನೆ. ಒಂದೇ ದೇವರ ಕಡೆಗೇ ಎಲ್ಲರೂ ಪ್ರಯಾಣ ಮಾಡುತ್ತಿರುವರು ಎಂಬುದನ್ನು ಕಂಡುಕೊಂಡಿದ್ದೇನೆ. ಆದರೆ ಅವರೆಲ್ಲರೂ ಬೇರೆ ಬೇರೆ ಮಾರ್ಗಗಳ ಮೂಲಕ ಹೋಗುತ್ತಿರುವರು ಅಷ್ಟೆ.

ಶ್ರೀರಾಮಕೃಷ್ಣ

ನಾನು (ದೇವರು) ಪ್ರತಿಯೊಬ್ಬರಿಗೂ ಅವರವರಿಗೆ ವಿಶಿಷ್ಟವಾದ ಪೂಜಾ ವಿಧಾನವನ್ನು ನೀಡಿರುವೆನು. ನಾನು ಪ್ರತಿಯೋರ್ವನಿಗೂ ತನ್ನದೇ ಆದ ಅಭಿವ್ಯಕ್ತಿಯನ್ನು ನೀಡಿರುವೆನು. ಹಿಂದೂಸ್ಥಾನದ ಭಾಷಾ ವೈಶಿಷ್ಟ್ಯ ಹಿಂದೂಗಳಿಗೆ ಉತ್ತಮ, ಸಿಂಧೂ ದೇಶದ ಭಾಷಾವೈಶಿಷ್ಟ್ಯ ಆ ದೇಶದವರಿಗೆ ಉತ್ತಮ. ನಾನು ಭಾಷೆಯನ್ನಾಗಲಿ, ನುಡಿಯನ್ನಾಗಲಿ ನೋಡುವುದಿಲ್ಲ. ನಾನು ಆಂತರಿಕ ಭಾವವನ್ನು, ಹೃದಯವಂತಿಕೆಯನ್ನು ನೋಡುತ್ತೇನೆ.



ಜಲಾಲುಲ್-ದಿನ್ ರೂಮಿ

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೇ |
ಅವರವರ ಭಾವಕ್ಕೆ
ಅವರವರ ಪೂಜೆಗೆ
ಅವರವರಿಗೆಲ್ಲ ದೇವ ನೀನೊಬ್ಬನೇ ||

ಮುಪ್ಪಿನ ಷಡಕ್ಷರಿ